ಓ.ಎಸ್. ನಂ. 88/2022
ಪಿ.ಡಬ್ಲ್ಯೂ- 1

(ಇಂದು ದಿಃ 19-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲು **:- ಶ್ರೀ. A.M. ವಕೀಲರಿಂದ :-**

ದಾವಾ ಸ್ವತ್ತುಗಳು ಮುಂಚೆ ಬಸಪ್ಪ ತಂದೆ ಬಸಪ್ಪ ರವರಿಗೆ ಸಂಬಂಧ ಪಟ್ಟ ಸ್ವತ್ತುಗಳು ಎಂದರೆ ಸರಿ. ಬಸಪ್ಪ ತಂದೆ ಬಸಪ್ಪನಿಗೆ ಇಬ್ಬರು ಮಕ್ಕಳು ಅವುರುಗಳೆಂದರೆ ಮಹಾದೇವಪ್ಪ ಮತ್ತು ಶರಣಪ್ಪ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರ ಅವುರುಗಳೆಂದರೆ ಸುಗಮ್ಮ ಮತ್ತು ಈರಮ್ಮ ಎಂದು ಹೇಳುತ್ತಾರೆ. ಶರಣಪ್ಪ ಸುಗಮ್ಮನ ಮಗ. ಮಹಾದೇವಪ್ಪ ಮತ್ತು ಸಿದ್ರಮಾಪ್ಪ ಈರಮ್ಮನ ಮಕ್ಕಳು. 1983-84 ರಲ್ಲಿ ಬಸಪ್ಪ ತಂದೆ ಬಸಪ್ಪ ತನ್ನ ಮೊಮ್ಮಕ್ಕಳಿಗೆ ಮತ್ತು ಮಗನಿಗೆ ಮೃತ್ಯು ಪತ್ರದ ಮೂಲಕ ಆಸ್ತಿಗಳನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದು ನೋಂದಾಯಿತ ಮೃತ್ಯು ಪತ್ರ ಆಗಿದ್ದು ಅದು ದಿಃ 26-09-1983 ರಂದು ನೋಂದಣಿ ಆಗಿದೆ ಎಂದರೆ ಸರಿಯಲ್ಲ . ಸದರಿ ಮೃತ್ಯು ಪತ್ರದಲ್ಲಿ ಸರ್ವೆ ನಂ 110/3 ಮತ್ತು 83 ನ್ನು ಕೂಡ ವಿಲ್ ಮಾಡಿದ್ದು ಆದರೆ ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿ ಸರ್ವೆ ನಂ. 110/3 ಮತ್ತು 83 ಗುರುಲಿಂಗಪ್ಪ ರವರಿಗೆ ಸೇರಿದ ಸ್ವತ್ತುಗಳು ಎಂದು ಹೇಳುತ್ತಾರೆ. ಸದರಿ ಸರ್ವೆ ನಂಬರಗಳಲಿ ಬಸಪ್ಪನಿಗೆ ಒಂದು ಭಾಗ ಮತ್ತು ಗುರುಲಿಂಗಪ್ಪನಿಗೆ ಒಂದು ಭಾಗ ಇದೆ ಎಂದರೆ ಸರಿಯಲ್ಲ. ಬಸಪ್ಪ ತಂದೆ ಬಸಪ್ಪನ ಅಳಿಯ ಮಲ್ಲಿಕಾರ್ಜುನ ಚಂಡ್ರಿಕಿ ಯಲ್ಲಿರುತ್ತಾನೆ ಎಂದರೆ ಸರಿ. ಆತನಿಗೆ ಸರ್ವೆ ನಂ. 83/2 ರಲ್ಲಿ 3 ಎಕರೆ 23 ಗುಂಟೆ ಸ್ವತ್ತನ್ನು ವಿಲ್ ಮಾಡಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮಹಾದೇವಪ್ಪನಿಗೆ ಸವೆ ನಂ. 110/3 ಮತ್ತು 114, 111 ಇದರಲ್ಲಿನ ಜಮೀನುಗಳನ್ನ ಬಸಪ್ಪ ಮಹಾದೇವಪ್ಪನಿಗೆ ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮೊಮ್ಮಕಳಾದ 2 ರಿಂದ 4 ನೇ ಪ್ರತಿವಾದಿಯರಿಗೆ ಪಶ್ಚಿಮ ದಿಕ್ಕಿನ ಸ್ವತ್ತುಗಳನ್ನು ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1983 ರಿಂದ ವಿಲ್ ಪ್ರಕಾರ ಅವರವರು ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಿಲ್ ಪ್ರಕಾರ ಬಂದ ಜಮೀನುಗಳಲ್ಲಿ ಸ್ವಲ್ಪ ಜಮೀನುಗಳನ್ನು ಈಗಾಲೆ ಮಾರಿಕೊಂಡಿದ್ದಾರೆ ಎಂದರೆ ಸರಿಯಲ್ಲ.

1983 ರಿಂದ ಇಲ್ಲಿಯವರೆಗೆ ವಿಲ್ ಪತ್ರಕ್ಕೆ, ಅದರ ಆಧಾರದೆ ಮೇಲೆ ಆದ ಮುಟೇಷನ ರಿಜಿಷ್ಟರಗೆ ಮತ್ತು ಪಹಣಿ ಪತ್ರಿಕೆಗಳನ್ನು ಪ್ರಶ್ನೀಸಿ ನಾನು ಯಾವುದೇ ಅರ್ಜಿ ಅಥವಾ ದಾವೆ ಸಲ್ಲಿಸಿಲ್ಲ ಎಂದರೆಸರಿಯಲ್ಲ. ಸರ್ವೆ ನಂ. 110 ರಲ್ಲಿನ ಜಮೀನು ಪೈಕಿ ಸ್ವಲ್ಪ ಜಮೀನನ್ನ ಮಹಾದೇವಪ್ಪ ಸುಮಾರು 10 ಜನರಿಗೆ ಮಾರಾಟ ಮಾದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 110 ನ್ನು ಸರ್ವೆ

ಮಾಡುವಾಗ ನಮ್ಮ ಜಮೀನು ಪ್ರತಿವಾದಿಯರಿಗೆ ಬಂದ ಕಾರಣ ಹೇಗಾದರೂ ಮಾಡಿ ಅವರಿಗೆ ತೊಂದರೆ ಮಾಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನ ಎಂದರೆ ಸರಿಯಲ್ಲ. ಸರ್ವೆ ನಂ. 111 ರಲ್ಲಿನ ಜಮೀನನ್ನು ಪ್ರತಿವಾದಿಯರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಇಲ್ಲಿಯವರೆಗೆ ವಿಲ್ ಪತ್ರ ಮತ್ತುಕ್ರಯ ಪತ್ರಗಳನ್ನು ಪ್ರಶ್ನಿಸಿ ನಾನು ದಾವೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಕುಟುಂಬಕ್ಕೂ ಪ್ರತಿವಾದಿಯರ ಕುಟುಂಬಕ್ಕೂ ಮತ್ತು ಅವರ ಕುಟುಂಬದ ಆಸ್ತಿಗಳಿಗೂ ಮತ್ತು ನನಗೂ ಯಾವುದೇ ಸಂದಂಧ ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿರುವ ವಂಶಾವಳಿ ಸುಳ್ಳಿನಿಂದಕೂಡಿದೆ ಎಂದರೆ ಸರಿಯಲ್ಲ. ನನ್ನ ಪೂರ್ವಜನ ಜಮೀನುಗಳು ನನ್ನ ಹೆಸರಿನಲ್ಲಿ ಮತ್ತು ನನ್ನ ತಮ್ಮನ ಹೆಸರಿನಲ್ಲಿ ಇದ್ದರೂ ಕೂಡ ವಿನಃ ಕಾರಣ ಪ್ರತಿವಾದಿಯರ ವಿರುದ್ಧ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.